**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-225/2023**

ಪಿ.ಡಬ್ಲ್ಯೂಃ- 2
ಸಿ.ಡಬ್ಲ್ಯೂಃ- 1

| | | |
|---|---|---|
| ಸಾಕ್ಷಿದಾರರ ಹೆಸರುಃ | : | ವಿನಯ್ ಕುಮಾರ್ ಸಿ. |
| ತಂದೆಯ ಹೆಸರುಃ | : | ಲೇಟ್ ಚೆಲುವರಂಗಯ್ಯ |
| ವಯಸ್ಸುಃ | : | 32 ವರ್ಷ |
| ವೃತ್ತಿಃ | : | ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಹಾಸನ ಬಡಾವಣೆ ಪೊಲೀಸ್ ಠಾಣೆ |
| ವಾಸಃ | : | ಹಾಸನ. |

**ದಿನಾಂಕಃ 12-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ20.11.2020 ರಿಂದ 12.08.2024 ರವರೆಗೆ ಹೊಳೇನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

2. ದಿಃ 20.07.2023 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿರುವಾಗ ಹಳ್ಳಿ ಮೈಸೂರು ಠಾಣೆಯ ಸಿಬ್ಬಂದಿಯಾದ ಚಾಸಾ-2 ಶಶಿಕುಮಾರ್ ಸಿಪಿಸಿ 66 ರವರು ಠಾಣೆಗೆ ಹಾಜರಾಗಿ ಒಂದು ವರದಿ ಹಾಗೂ ಆರೋಪಿ ಚಂದ್ರಮೌಳಿ ಉಃ ಮುರುಳಿಯನ್ನು ನನ್ನ ಮುಂದೆ ಹಾಜರುಪಡಿಸಿದರು. ನಾನು ನನ್ನ

ಮುಂದೆ ಹಾಜರುಪಡಿಸಿದ ಆರೋಪಿ ಚಂದ್ರಮೌಳಿ ಉ: ಮುರುಳಿಯನ್ನು ವಿಚಾರ ಮಾಡಲಾಗಿ ಆತ ಆತನ ಹೆಸರು ಹಾಗೂ ವಿಳಾಸದ ಬಗ್ಗೆ ತಿಳಿಸಿರುತ್ತಾನೆ. ಆರೋಪಿ ತಾನು ಹಾಸನದ ಗೋಕುಲ್ ದಾಸ್ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ ಹಾಗೂ 12 ವರ್ಷದ ಹಿಂದೆ ಕಲ್ಲಹಳ್ಳಿ ಗ್ರಾಮದ ಸೋಮಶೇಖರ ರವರ ಮಗಳಾದ ಅಂಬಿಕಾ ರವರನ್ನು ವಿವಾಹವಾಗಿದ್ದು ಆ ವಿವಾಹ ಸಂಬಂಧದಿಂದ ತನಗೆ ಇಬ್ಬರು ಮಕ್ಕಳು ಇರುವುದಾಗಿ ತಿಳಿಸಿರುತ್ತಾನೆ. ದಿ:18.07.2023 ರಂದು ಆರೋಪಿತನ ಪತ್ನಿಯಾದ ಅಂಬಿಕಾ ರವರು ಗಾರ್ಮೆಂಟ್ ಕೆಲಸಕ್ಕೆ ಹೋಗಿದ್ದು ವಾಪಸ್ ಮನೆಗೆ ಬಾರದೆ ಆಕೆಯ ತವರು ಮನೆಯಾದ ಕಲ್ಲಹಳ್ಳಿ ಗ್ರಾಮಕ್ಕೆ ಹೋಗಿದ್ದು, ಮರುದಿನ ಆರೋಪಿತ ತನ್ನ ಪತ್ನಿಗೆ ಫೋನ್ ಮಾಡಿ ಆಕೆ ಮನೆಗೆ ಬಾರದ ಬಗ್ಗೆ ವಿಚಾರಿಸಿದ್ದು ಆಕೆಯನ್ನು ತನ್ನ ಮನೆಗೆ ಕರೆದುಕೊಂಡು ಬರಲು ಕಲ್ಲಹಳ್ಳಿಗೆ ಹೋಗಿದ್ದ ಬಗ್ಗೆ ತಿಳಿಸಿರುತ್ತಾನೆ. ಕಲ್ಲಹಳ್ಳಿಯಲ್ಲಿ ಆರೋಪಿ ಹಾಗೂ ಆತನ ಪತ್ನಿ ಅಂಬಿಕಾ ರವರ ನಡುವೆ ಜಗಳ ಆಗಿರುವ ಬಗ್ಗೆ ಸಹ ಆರೋಪಿತ ನನಗೆ ತಿಳಿಸಿದ. ಈ ಬಗ್ಗೆ ಹಳ್ಳಿ ಮೈಸೂರು ಠಾಣೆಯಲ್ಲಿ ಆರೋಪಿತನ ಪತ್ನಿ ಆತನ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಆರೋಪಿಯನ್ನು ಠಾಣೆಗೆ ಕರೆಸಿ ವಿಚಾರ ಮಾಡಿದ್ದ ಬಗ್ಗೆ ಸಹ ಆರೋಪಿತ ತಿಳಿಸಿದ. ಪೊಲೀಸರು ಆರೋಪಿ ಹಾಗೂ ಆತನ ಪತ್ನಿ ಅಂಬಿಕಾ ರವರು ಹೊಂದಾಣಿಕೆ ಮಾಡಿಕೊಂಡು ಹೋಗುವಂತೆ ತಿಳಿಸಿದ್ದರೂ ಸಹ ಅಂಬಿಕಾ ಆರೋಪಿತನ ಜೊತೆ ಆತನ ಮನೆಗೆ ಹೋಗದೆ ತವರು ಮನೆಯಾದ ಕಲ್ಲಹಳ್ಳಿಗೆ ವಾಪಸ್ ಹೋಗಿದ್ದ ಬಗ್ಗೆ ಸಹ ನನಗೆ ತಿಳಿಸಿದ. ದಿ:20.07.2023ರ ಬೆಳಿಗ್ಗೆ ಆರೋಪಿತನ ಪತ್ನಿ ಅಂಬಿಕಾ ಆರೋಪಿತನಿಗೆ ಫೋನ್ ಮಾಡಿ ಆಕೆಯ ಐಡಿ ಕಾರ್ಡು

ಹಾಗೂ ಮಾಸ್ಕನ್ನು ತೆಗೆದುಕೊಂಡು ಹಾಸನಕ್ಕೆ ಬರುವಂತೆ ಆರೋಪಿತನಿಗೆ ತಿಳಿಸಿದ್ದು ಅದರಂತೆ ಆತ ಬೆಳಿಗ್ಗೆ 9 ಗಂಟೆ ಸಮಯಕ್ಕೆ ಹಾಸನಕ್ಕೆ ಬಂದು ಅಂಬಿಕಾ ರವರ ಐಡಿ ಕಾರ್ಡು ಹಾಗೂ ಮಾಸ್ಕನ್ನು ತೆಗೆದುಕೊಂಡು ಆಕೆಗೆ ಅದನ್ನು ನೀಡಲು ಕಾಯುತ್ತಿದ್ದಾಗ ಅಂಬಿಕಾ ರವರು ಓರ್ವ ಯುವಕನೊಂದಿಗೆ ಮೋಟಾರು ಬೈಕಿನಲ್ಲಿ ಹಿಂಬದಿ ಸವಾರಳಾಗಿ ಹೊಳೇನರಸೀಪುರಕ್ಕೆ ಹೋಗಿದ್ದನ್ನು ಆರೋಪಿತ ನೋಡಿ ಒಂದು ಆಟೋರಿಕ್ಷಾದಲ್ಲಿ ಅವರನ್ನು ಹಿಂಬಾಲಿಸಿಕೊಂಡು ಹೋಗಿ ಹೊಳೇನರಸೀಪುರ ಹೇಮಾವತಿ ನದಿ ಸೇತುವೆ ಮೇಲೆ ಮೋಟಾರು ಬೈಕನ್ನು ಓವರ್ ಟೇಕ್ ಮಾಡಿ ನಿಲ್ಲಿಸಿ, ಮೋಟಾರು ಬೈಕ್ ಸವಾರನನ್ನು ಯಾರು ಎಂದು ಪ್ರಶ್ನಿಸಿ ಆತ ಅಂಬಿಕಾ ರವರನ್ನು ಬೈಕಿನಲ್ಲಿ ಕರೆದುಕೊಂಡು ಹೋಗುತ್ತಿರುವ ಬಗ್ಗೆ ಪ್ರಶ್ನಿಸಿದಾಗ ಆತ ಅಂಬಿಕಾ ರವರನ್ನು ಬೈಕಿನಿಂದ ಇಳಿಸಿ ಹೊರಟು ಹೋಗಿದ್ದ ಬಗ್ಗೆ ಆರೋಪಿತ ನನಗೆ ತಿಳಿಸಿರುತ್ತಾನೆ. ನಂತರ ಆರೋಪಿತ ಆತನ ಪತ್ನಿ ಅಂಬಿಕಾ ರವರನ್ನು ಆಕೆ ಬೇರೆ ಯುವಕನ ಜೊತೆ ಬೈಕಿನಲ್ಲಿ ಹೋಗುತ್ತಿದ್ದ ಬಗ್ಗೆ ಪ್ರಶ್ನಿಸಿ ಆಕೆಯನ್ನು ಹೊಳೇನರಸೀಪುರ ಬಸ್ ನಿಲ್ದಾಣಕ್ಕೆ ಕರೆತಂದ ಬಗ್ಗೆ ಸಹ ತಿಳಿಸಿರುತ್ತಾನೆ. ಆರೋಪಿತ ಆತನ ಹೆಂಡತಿ ಅಂಬಿಕಾ ರವರು ಬೇರೆ ವ್ಯಕ್ತಿಯ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿರಬಹುದು ಎಂದು ಅನುಮಾನಗೊಂಡ ಆರೋಪಿತ ತನ್ನ ಪತ್ನಿ ಅಂಬಿಕಾ ರವರನ್ನು ಸಾಯಿಸಬೇಕು ಎಂದು ತೀರ್ಮಾನಿಸಿ ಅವಳನ್ನು ಎಸ್ ಅಂಕನಹಳ್ಳಿ ಫಾರೆಸ್ಟ್ ಒಳಗೆ ಕರೆದುಕೊಂಡು ಹೋಗಿ ಆಕೆಯನ್ನು ಸಾಯಿಸುವ ಬಗ್ಗೆ ತೀರ್ಮಾನ ಮಾಡಿಕೊಂಡು ಆತನ ಹೆಂಡತಿಯನ್ನು ಊರಿಗೆ ಕರೆದುಕೊಂಡು ಹೋಗುವ ನೆಪದಲ್ಲಿ ಹೊಳೇನರಸೀಪುರದಿಂದ ಬಸ್ಸಿನಲ್ಲಿ ಪೆದ್ದನಹಳ್ಳಿ ತನಕ ಹೋಗಿ ಅಲ್ಲಿ ಬಸ್ಸಿನಿಂದ ಇಳಿದು ಆರೋಪಿತ ತನ್ನ ಹೆಂಡತಿ

ಅಂಬಿಕಾಳನ್ನು ಫಾರೆಸ್ಟ್ ಒಳಗೆ ಕರೆದುಕೊಂಡು ನಡೆದುಕೊಂಡು ಹೋಗುವಾಗ ಆಕೆಯ ಕೈಯನ್ನು ಹಿಡಿದುಕೊಂಡು ಆಕೆಯನ್ನು ಕುರಿತು ನಿನಗೇನು ಮಾನ ಮರ್ಯಾದೆ ಇಲ್ಲವಾ, ನನಗಿಂತ ಗಂಡ ಬೇಕಾ, ಯಾಕೆ ಹೀಗೆ ಮಾಡುತ್ತಾ ಇದ್ದೀಯಾ, 11 ವರ್ಷದ ಮಕ್ಕಳಿದ್ದಾರೆ, ಈ ವಯಸ್ಸಿನಲ್ಲಿ ಇದೆಲ್ಲಾ ಬೇಕಾ, ಇದೆಲ್ಲಾ ಬಿಟ್ಟುಬಿಡು ಎಂದು ತನ್ನ ಪತ್ನಿಗೆ ಹೇಳಿದ್ದು ಆರೋಪಿತನ ಪತ್ನಿ ಆರೋಪಿಯನ್ನು ಕುರಿತು ಆಕೆ ಆರೋಪಿಯನ್ನು ಬಿಟ್ಟರೂ ಸಹ ಆಕೆ ಸಂಬಂಧ ಹೊಂದಿರುವ ವ್ಯಕ್ತಿಯನ್ನು ಬಿಡುವುದಿಲ್ಲ ಎಂದು ತಿಳಿಸಿದ್ದು ಇದರಿಂದ ತಾನು ಮೊದಲು ತೀರ್ಮಾನಿಸಿದಂತೆ ಆರೋಪಿತ ತನ್ನ ಹೆಂಡತಿ ಅಂಬಿಕಾ ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವಳ ಕಪಾಲಕ್ಕೆ ಕೈಯಿಂದ ಹೊಡೆದಿದ್ದು ಅವಳು ಮೂರ್ಛೆ ಹೋದಂತೆ ಕೆಳಕ್ಕೆ ಬಿದ್ದಾಗ ಸ್ಥಳದಲ್ಲಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಸದರಿ ಕಲ್ಲನ್ನು ಅಂಬಿಕಾ ರವರ ತಲೆಯ ಮೇಲೆ ಎತ್ತಿ ಹಾಕಿ ಆಕೆಯನ್ನು ಬೆಳಿಗ್ಗೆ ಸುಮಾರು 10.30 ಗಂಟೆ ಸಮಯಕ್ಕೆ ಕೊಲೆ ಮಾಡಿರುವುದಾಗಿ ನನಗೆ ತಿಳಿಸಿರುತ್ತಾನೆ.

3. ತನ್ನ ಪತ್ನಿ ಅಂಬಿಕಾ ರವರನ್ನು ಕೊಲೆ ಮಾಡಿದ ನಂತರ ಆರೋಪಿತ ಪೊಲೀಸರ ಮುಂದೆ ಶರಣಾಗಬೇಕು ಎನ್ನುವ ಉದ್ದೇಶದಿಂದ ಮುಖ್ಯ ರಸ್ತೆಗೆ ಬಂದು ಅಲ್ಲಿಂದ ಒಂದು ಆಟೋರಿಕ್ಷಾದಲ್ಲಿ ದೊಡ್ಡಕಾಡನೂರು ಠಾಣೆಗೆ ಹೋಗಿ ಅಲ್ಲಿದ್ದ ಪೊಲೀಸ್ ಕಾನ್ಸ್ ಟೇಬಲ್ ಶಶಿಕುಮಾರ್ ರವರಿಗೆ ವಿಷಯ ತಿಳಿಸಿರುವುದಾಗಿ ಅವರು ಆರೋಪಿಯನ್ನು ನನ್ನ ಮುಂದೆ ಕರೆದುಕೊಂಡು ಬಂದು ಹಾಜರುಪಡಿಸಿರುವ ಬಗ್ಗೆ ಸಹ ಆರೋಪಿತ ನನಗೆ ತಿಳಿಸಿದ. ಆರೋಪಿತ ನನ್ನ ಮುಂದೆ ತಿಳಿಸಿದ ವಿಷಯವನ್ನು ನಾನು

ಆರೋಪಿತನ ಹೇಳಿಕೆ ರೂಪದಲ್ಲಿ ಪಡೆದುಕೊಂಡು ಅದಕ್ಕೆ ಆರೋಪಿತನ ಸಹಿಯನ್ನೂ ಸಹ ಪಡೆದುಕೊಂಡಿರುತ್ತೇನೆ. ಆರೋಪಿತನ ಹೇಳಿಕೆಯನ್ನು ಪಡೆದುಕೊಂಡ ನಂತರ ಅದನ್ನು ಆರೋಪಿತನಿಗೆ ಓದಿ ಹೇಳಿ ಆತನ ಸಹಿಯನ್ನು ಪಡೆದುಕೊಂಡಿರುತ್ತೇನೆ. ಚಾಸಾ-2 ಶಶಿಕುಮಾರ್ ರವರು ನನ್ನ ಮುಂದೆ ಹಾಜರುಪಡಿಸಿದ ವರದಿ ನೋಡಿದರೆ ಗುರುತಿಸಬಲ್ಲೆ. ನಿಪಿ-1 ವರದಿಯನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆರೋಪಿತನ ಹೇಳಿಕೆ ಎಂದು ಸಾಕ್ಷಿದಾರರು ಗುರುತಿಸಿದ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-2 ರ ಪ್ರತೀ ಪುಟದಲ್ಲಿ ಆರೋಪಿತನ ಸಹಿ ಇರುತ್ತದೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ನಿಪಿ-2 ಹೇಳಿಕೆಯಲ್ಲಿ ಸಾಕ್ಷಿದಾರರು ಗುರುತಿಸಿದ ಆರೋಪಿತನದು ಎನ್ನಲಾದ 4 ಸಹಿಗಳನ್ನು ಕ್ರಮವಾಗಿ ನಿಪಿ-2(ಎ) ರಿಂದ ನಿಪಿ-2(ಡಿ) ಎಂದು ಗುರುತಿಸಲಾಯಿತು. ನಿಪಿ-2ನ್ನು ಪಡೆದುಕೊಂಡ ಬಗ್ಗೆ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-2(ಇ) ಎಂದು ಗುರುತಿಸಲಾಯಿತು. ಆರೋಪಿತ ನನ್ನ ಮುಂದೆ ನೀಡಿದ ನಿಪಿ-2 ಹೇಳಿಕೆ ಆಧಾರದ ಮೇಲೆ ನಾನು ಠಾಣಾ ಮೊಃನಂ.81/2023 ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ.302 ರಲ್ಲಿ ಸ್ವಯಂ ಫಿರಾದುದಾರನಾಗಿ ಫಿರ್ಯಾದನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸಾಕ್ಷಿದಾರರು ನ್ಯಾಯಾಲಯಕ್ಕೆ ದಾಖಲಿಸಿದ ವರದಿಯನ್ನು ನಿಪಿ-3 ಎಂದು, ನಿಪಿ-3 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-3(ಎ) ಎಂದು, ಸಾಕ್ಷಿದಾರರು ಗುರುತಿಸಿದ ಪ್ರಥಮ ವರದಿಯನ್ನು ನಿಪಿ-4 ಎಂದು, ನಿಪಿ-4 ರಲ್ಲಿ

ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ಪ್ರಕರಣ ಘೋರ ಅಪರಾಧ ಒಳಗೊಂಡಿದ್ದ ಕಾರಣ ಪ್ರಕರಣದ ಮುಂದಿನ ತನಿಖೆಯನ್ನು ಹಾಗೂ ಆರೋಪಿಯನ್ನು ನಾನು ಚಾಸಾ–28 ಸಿಪಿಐ ರವರ ಮುಂದೆ ಹಾಜರುಪಡಿಸಿರುತ್ತೇನೆ. ಆರೋಪಿ ನ್ಯಾಯಾಲಯದ ಮುಂದೆ ಹಾಜರಿರುವುದಾಗಿ ಸಾಕ್ಷಿದಾರರು ಆರೋಪಿಯನ್ನು ವಿ ಸಿ ಮೂಲಕ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ವಕೀಲರಿಂದಃ**

ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.